# ಫೋಟೋ

ಮಲಯಾಳಂ ಮೂಲ: **ಎಂ. ಮುಕುಂದನ್**
ಕನ್ನಡಕ್ಕೆ: **ಕೆ. ಪ್ರಭಾಕರನ್**

ಕಲೆ: ಡಿ.ಕೆ. ರಮೇಶ್



ಒಮ್ಮೆ ಇಬ್ಬರು ಮಕ್ಕಳು ಫೋಟೊ ತೆಗೆಸಲು ಹೋದರು. ಸುಮಾರು ಸಮಯದಿಂದ ಅವರ ಎಳೆಯ ಮನಸ್ಸುಗಳಲ್ಲಿ ಈ ಹಂಬಲ ಮೊಳೆಯುತ್ತಿತ್ತು. ಇಂದು 'ನವದಂಪತಿಗಳು' ಎನ್ನುವ ಶೀರ್ಷಿಕೆಯೊಂದಿಗೆ ಸುದ್ದಿಪತ್ರಿಕೆಗಳಲ್ಲಿ ಬರುವ ಫೋಟೊಗಳೇ ಅವರ ಎಳೆಯ ಮನಸ್ಸುಗಳಲ್ಲಿ ಈ ಹಂಬಲ ಮೊಳೆಯಲು ಕಾರಣ. ಬೆಳಗ್ಗೆ ಶಾಲೆಗೆ ಹೋಗುವ ಸಿದ್ಧತೆ ನಡೆಸುವುದರ ನಡುವೆ ಅಡಿಗೆಮನೆಯಿಂದ ಅಮ್ಮ ಗದರಿಸುವಾಗ, ಬಯ್ದಾಡುವಾಗ ಅವರು ಆಗಾಗ್ಗೆ ಅಂಗಳಕ್ಕೆ ಓಡಿ ಬಂದು ಪತ್ರಿಕೆ ಬಂತಾ ಎಂದು ನೋಡುತ್ತಿದ್ದರು. ಅವರ ಅಪ್ಪ ಚಹಾದೊಂದಿಗೆ ಪತ್ರಿಕೆ ಸಿಗದಿದ್ದರೆ, ಪಾಯಿಖಾನೆಗೆ ಹೋಗುವುದಕ್ಕೂ ಶೇವಿಂಗ್ ಮಾಡಿಕೊಳ್ಳುವುದಕ್ಕೂ ಸಾಧ್ಯವಾಗ್ತಾ ಇರಲಿಲ್ಲ. ಒಂದೊಮ್ಮೆ ಊರಲ್ಲಿ ಬಂದ್ ಘೋಷಣೆ ಏನಾದರೂ ಮಾಡಿಬಿಟ್ಟಿದ್ದರೆ ಪತ್ರಿಕೆ ಕಾಣದೆ ಅವರು ಅಸ್ವಸ್ಥರಾಗಿ ಆಚೆಗೂ ಈಚೆಗೂ ಓಡಾಟ... ಅಷ್ಟೇನು ಹಣವಂತನಲ್ಲದಿದ್ದರೂ ಹಲವಾರು ಪತ್ರಿಕೆಗಳನ್ನು, ವಾರಪತ್ರಿಕೆಗಳನ್ನು ನಿಯಮಿತವಾಗಿ ತರಿಸುತ್ತಿದ್ದರು. ಯಾವ ಪತ್ರಿಕೆಯ ಯಾವ ಅಂಕಣದಲ್ಲಿ ವಿವಾಹಿತ ಜೋಡಿಯ ಫೋಟೊ ಬರುತ್ತದೆಯೆನ್ನುವುದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ಕೆಲವು ಫೋಟೊಗಳನ್ನು ಅವಳು ಕತ್ತರಿಸಿ ಬೌಂಡ್ ಬುಕ್ಕಿನಲ್ಲಿ ಅಂಟಿಸಿಡುತ್ತಿದ್ದಳು. ಇದನ್ನೆಲ್ಲ ಮಾಡುವಾಗ ಯಾರ ಗಮನಕ್ಕೂ ಬಾರದಂತೆ ಜಾಗ್ರತೆ ವಹಿಸುತ್ತಿದ್ದಳು.

"ನಿನಗೆ ಯಾವ ಫೋಟೊ ಇಷ್ಟ?..."

ಶಾಲೆಗೆ ಹೋಗುವ ದಾರಿಯಲ್ಲಿ ಬೌಂಡ್ ಬುಕ್ಕಿನಲ್ಲಿದ್ದ ಫೋಟೊಗಳನ್ನು ತೆಗೆದು ಅವನಿಗೆ ತೋರಿಸಿದಳು. ಅವನು ಅದರಲ್ಲಿ ಹೊಸದಾಗಿ ಅಂಟಿಸಿಟ್ಟಿದ್ದ ಫೋಟೊಗಳ ಮೇಲೆ ಕಣ್ಣು ಹಾಯಿಸಿ ನೋಡಿದ.